ಗವಿ ಮನುಷ್ಯನಂತೆ ಕಾಣ್ತಿತ್ತಿದ್ದನಂತೆ. ಅವನ ಸಂಗ್ತಿ ನಾಯಿ ಇತ್ತು. ಆವಾಗ ದಣಪೆ ಹತ್ರ ಬೊಗಳ್ತು ನೋಡಿ ಅದೇ ನಾಯಿ. ಕಾಯಿ ಹಿಡಿಯಲು ಹೋದವರು ಕರೆದರೂ ಬರಲಿಲ್ಲ. ನಾವೆಲ್ಲ ಇದ್ದ ಗಂಜೀಕೇಂದ್ರಕ್ಕೂ ಬರಲಿಲ್ಲ; ನೀರಿಳಿದ ನಂತ್ರ ಮನೆಗೆ ಹೋಗಾಯ್ತು ಅಲ್ಲಿಗೂ ಬರಲಿಲ್ಲ. ಹೆಂಡ್ತಿ ಕರ್ಕಂಡು ಹೋಗ್ಬಿಟ್ಟ. ಹಿಂದೆಲ್ಲ ಹತ್ಯಾರ ಕಾಯ್ಸಲು ದಂಪತಿ ಹೊರ್ಗೆ ಹೋಗಿ ಬರೋದಿತ್ತು; ತಿಂಗಳೊಪತ್ತಿನಲ್ಲಿ ಬರ್ತಿದ್ರು. ಈ ಸಲ ವರ್ಷಾದರೂ ಬರಲಿಲ್ಲ. ಬೀಗದ ಕಸಬು ನಿಂತಾಗ್ಲೂ ನನಗೆ ಅಷ್ಟು ಬೇಜಾರಾಗಿರ್ಲಿಲ್ಲ; ನೋವ ಹೊಟ್ಟೇಲಿ ಗುಟ್ಟಾಗಿ ಇಟ್ಕಂಡು ಹೋದ. ಕಾರಣ ಅವನನ್ನೆ ಕೇಳ್ಬೇಕು."

ಮಾತಾಡಲು ನನಗೇನೂ ಹೊಳೆಯಲಿಲ್ಲ. ನಂದಾಚಾರಿ ರಹಸ್ಯ ವಿಚಾರ ಎಂಬಂತೆ ನನ್ನ ಕಿವಿಯ ಸನಿಹ ಬಾಗಿ,"ನಮ್ಮದೇ ಮನೆತನದ ಹುಡುಗ ಮುಂಬೈಯೊ ಎಲ್ಲೊ ಕಬ್ಬಿಣದ ಪ್ಯಾಕ್ಟರಿಗೆ ಸೇರ್ಕಂಡವ ನೆಗ್ಸಿನ ಮಾರ್ನೆ ದಿನ ಕುರ್ವೆಗೆ ಬಂದಂವ ಮಂಜನ ಜೊತೆಗಿದ್ನಂತೆ. ದೊಡ್ಡ ಪಗಾರಿನ ನೌಕರಿ ಕೊಡ್ತಾರಂತೆ ಬಾ ಎಂದನಂತೆ. ಎಲ್ಲ ಅಂತೆ ಕಂತೆ ಸುದ್ದಿ. ಮುಂದೆ ಏನಾಯ್ತೊ ಗೊತ್ತಿಲ್ಲ. ಹುಡುಗನ ಕಡೆಯಿಂದ್ಲೂ ಮಾಹಿತಿ ಸಿಗ್ಲಿಲ್ಲ. ನೀವೊಂದು ಉಪ್ಕಾರ ಮಾಡ್ಬೇಕು; ನೀವಂತು ಮಂಜನ ಹುಡ್ಕಂಡು ಹೊರಟಿದ್ದೀರಿ. ಅಂವನೆಲ್ಲಾದ್ರೂ ಸಿಕ್ಕಿದ್ರೆ ತಿಳಿಸಿ ನಾನೇ ಸ್ವಂತ ಬಂದು ಹೋಗ್ತೇನೆ" ಎಂದ.

ಮಂಜಾಚಾರಿಯನ್ನು ನಮ್ಮೂರಿಗೆ ಕರೆದೊಯ್ಯಲು ಬಂದ ನಾನು ಹೀಗೆ ಅವನು ಕುರ್ವೆಯನ್ನು ಬಿಟ್ಟು ಹೋಗಲು ಇರಬಹುದಾದ ಕಾರಣಗಳನ್ನು ಹುಡುಕುವ, ಅವನನ್ನು ಪತ್ತೆ ಮಾಡುವ ಹೊಣೆಗಾರಿಕೆಯಲ್ಲಿ ಸಿಕ್ಕಿ ಹಾಕಿ ಕೊಳ್ಳುತ್ತೇನೆ ಎಂದು ಎಣಿಸಿರಲಿಲ್ಲ. ವರ್ಷದಲ್ಲಿ ಎರಡುಮೂರು ಸಲ ಅವನು ಊರಿಂದ ಹೊರಗೆ 'ಹದ' ಹಾಕಲು ಹೋಗುತ್ತಿದ್ದ. ಅವನು ಕ್ಯಾಂಪ್ ಹಾಕುವ ಊರುಗಳ ಹೆಸರನ್ನು ನಂದಾಚಾರಿಯಿಂದ ಪಡೆದೆ. ಹೊರಡುವ ಮುನ್ನ ನಂದಾಚಾರಿ ನೆನಪಿಗೆ ಹಳೆಯ ಬೀಗವೊಂದನ್ನು ಕೊಟ್ಟ. ಕುಲುಮೆ ಶಾಲೆಯ ಕಲ್ಲಿನ ಮೇಲೆ ಕೂತು ನಂದಾಚಾರಿಯ ಹೆಂಡತಿ ನೈಟಿ ಸೊಸೆಯ ಹರಡಿದ ಕೂದಲಿಂದ ಹೇನು ಹೆಕ್ಕುತ್ತಿದ್ದಳು. ಬೆರಳುಗಳ ಚಿಮ್ಮಟಿಗೆಯಲ್ಲಿ ಹಿಡಿದ ಹೇನನ್ನು ಸೊಸೆಯ ಅಂಗೈ ಮೇಲೆ ಇಟ್ಟಳು; ಅವಳು ಹೆಬ್ಬೆರಳಿನ ಉಗುರಿನ ಬಲಿ ಪೀಠದ ಮೇಲೆ ವಿಲಿ ವಿಲಿ ಒದ್ದಾಡುತ್ತಿದ್ದ ಹೇನನ್ನು ಇಟ್ಟು ಅವಡುಗಚ್ಚಿ ಅರೆದಳು. ಶಾಲೆಯಿಂದ ಅದಾಗತಾನೆ ಬಂದ ಲಂಗದ ಹುಡುಗಿ ಅಂಗೈಯನ್ನು ಮೇಲೆ ಕೆಳಗೆ ಮಾಡಿ ಕವಡೆ ಆಡಿದಳು. ಅವರೆಲ್ಲ ಎದ್ದು ನಿಂತು ನಗುತ್ತಲೇ ವಿದಾಯ ಹೇಳಿದರು; ನಂದಾಚಾರಿ ಇಳಿತದ ನದಿಯ ತೀರದವರೆಗೆ ಬಂದು, "ನಾ ಹೇಳಿದ್ದು ನೆನಪಿರ್ಲಿ" ಎಂದು ಡಿಂಗಿ ಹತ್ತಿಸಿ ಹೋದ.

ಕುರ್ವೆಯಿಂದ ಮರಳಿದ ಬಳಿಕ ನಾನು ಮಂಜಾಚಾರಿ ಊರಿನ ಮೇಲೆ ಮುನಿಯಲು ಏನು ಕಾರಣ ಎಂದು ಯೋಚಿಸಿದೆ. ಜೀವ ಪಣಕ್ಕಿಟ್ಟು ಗಾಢಾಂಧಕಾರ ರಾತ್ರಿಯಲ್ಲಿ ನೆರೆಯಿಂದ ರಕ್ಷಿಸಲ್ಪಟ್ಟ ಜನರೇ ತನ್ನನ್ನು ಅಷ್ಟು ಸುಲಭದಲ್ಲಿ ಮರೆತರಲ್ಲ ಎಂದು ಸಹಜವಾಗಿಯೇ ಮಂಜಾಚಾರಿಗೆ ನೋವಾಗಿರಬಹುದು. ಹತ್ಯಾರಗಳಿಗೆ ಹದ ಹಾಕುವ ಅವನ ವಿದ್ಯೆ ಮೇಲೆ ಕಣ್ಣು ಬಿದ್ದ ಫ್ಯಾಕ್ಟರಿಯವರಿಂದ ತಪ್ಪಿಸಿಕೊಳ್ಳಲು ತಲೆ ಮರೆಸಿಕೊಂಡಿರಬಹುದು ಎಂದು ವ್ಯಾವಹಾರಿಕವಾಗಿ ತರ್ಕಿಸಿದೆ. ಜಾನು ತಾನು ಹಾಕಿದ ಕರಾರನ್ನು ಮುರಿಯದಿದ್ದರೆ ಈ ವರ್ಷ ಕಾಮಗಾರಿಯನ್ನೇ ಸ್ಥಗಿತಗೊಳಿಸುವುದು ಅನಿವಾರ್ಯವಾಗಬಹುದೆಂದು ಅನಿಸಿತು. ಆದರೆ ಕೆಲಸ ಗುತ್ತಿಗೆ ಮಾಡಿದ ಮನೆಯವರಿಂದ ಮುಂಗಡ ಹಣ ಪಡೆಯಲು ಬಂದಿದ್ದ ಜಾನು